**ತೆಲುಗು ಮೂಲ: ತಲ್ಲಾವಜ್ಜಲ ಪತಂಜಲಿ ಶಾಸ್ತ್ರಿ**
**ಕನ್ನಡಕ್ಕೆ: ಜಗದೀಶ್ ಚಂದ್ರ ಬಾಗಲಿ**

ಕಲೆ: ವಿ.ಎಂ. ಮಂಜುನಾಥ್

# ವಿರುಪಾಪುರ ಗಡ್ಡಿ

ಆ ಪೊಲೀಸ್ ಠಾಣೆ ಹಿಂದಕ ಎರಡು ಬೇವಿನ ಗಿಡ ಅದಾವ. ಆ ಗಿಡದ ನೆಳ್ಳು ಆ ಠಾಣೆನ, ಬಿಸಿಲು – ಮಳೆ ಮತ್ತ ಚಳಿಗಳ ಏಟಿನಿಂದ ಚೊಲೊ ಹೊತ್ತಿನ್ಯಾಗ ಕಾಯಾಕತ್ಯದ. ಹಿಂದಿನ ಕಾಂಪೌಂಡ್ ಗೋಡೆಗೆ ಹತ್ತಿಗೆಂಡು ಒಂದು ಸಣ್ಣ ಗೇಟ್ ಐತಿ. ಸುಮಸುಮ್ಮನೆ ಯಾರೂ ಅದನ್ನ ತೆಗೆಂಗಿಲ್ಲ.

ಒಂದು ಮೂಲ್ಯಾಗ ಒಂದು ಪಾಯಿಖಾನೆ ಮತ್ತ ಎರಡು ಬಚ್ಚಲ ಮನೆಗಳು ಅದಾವ. ಆ ಬೇವಿನ ಗಿಡದ ನೆಳ್ಳಿನ್ಯಾಗ ನೀಲಿ ಬಣ್ಣದ ನಾಲ್ಕು ಕುರ್ಚಿಗಳು ಯಾವಾಗಲೂ ಇರ್ತವ. ಹಿತ್ತಿಲಕ್ಕ ಹೊಂದಿಕೆಂಡೇ ಒಂದು ದೊಡ್ಡ ವರಾಂಡ ಐತಿ. ಅಲ್ಲಿ ನೂರಾರು ಅಪರಾಧಿಗಳು, ಅನುಮಾನಿತರ ಜತಿಗೆ ಎಷ್ಟೋ ಮಂದಿ ಅಮಾಯಕರು ಕುಂತು ಕುಂತು ಸವದು ಹೋಗಿರೋ ಎರಡು ಬೆಂಚುಗಳು ಅದಾವ.

ತನ್ನೆರಡು ಕಾಲುಗುಳ್ನ ಎದುರಿಗಿರಾ ಕುರ್ಚಿ ಮ್ಯಾಗ ಚಾಚಿ ಅವುಗಳನ್ನ ಅಲ್ಲಾಡಿಸಿಕೆಂತ ಕುಂತಾನ ಇನ್‌ಸ್ಪೆಕ್ಟರ್ ರೆಡ್ಡಿ. ಒಂದು ಸಲ ಉದ್ದುಕ ಸಿಗರೇಟಿನ ದಮ್ ಎಳದು ಪೀಸಿ ಕಡೆ ನೋಡಿ ಕೇಳಿದ,

"ಮ್... ಆ ಮುಂಡೇರಿಗೆ ಊಟ ಹಾಕಿದ್ರ್ಯಾ?"

ಆ ಪ್ರಶ್ನೆಗೆ ಹಲ್ಲು ಕಿಸಿದ ಪೀಸಿ, "ತಿಂದಾರ ಸರ್... ಬೇಬಿ ಬಂದು ರೊಕ್ಕ ಕೊಟ್ಟು ಹೋಗ್ಯಾಳ".

"ಎಂಗನ್ನ ಆಗ್ಲಿ... ಇಂತವರನ ಭಾಳ ಚೋಲೋ ನೋಡಿಕೆಂತಿರಿ ನೀವೆಲ್ಲಾ."

ಎಸ್ಸೈ ಮಾತಿನ್ಯಾಗಿನ ವ್ಯಂಗ್ಯ ಅರ್ಥ ಆಗಿ ಸುಮ್ನೆ ನಿಂತುಗಂಡ ಪೀಸಿ.

"ಎಷ್ಟು ಮಂದಿ ಇವ್ರು?"

"ನಾಕು ಮಂದಿ ಅದಾರ ಸರ್. ಅವರ ಪೈಕಿ ಮೂವರು ಹಳೇವ್ರೇ. ಒಬ್ಬಾಕಿ ಗೋವಾಲಿಂದ ಬಂದಾಳಂತ ಸರ್."

"ಹೌದು ಮತ್ತ... ಇವ್ರಿಗೂ ನಮ್ಮಂಗ ಟ್ರಾನ್ಸಫರ್‌ಗಳು ಇರ್ತಾವ."

ಎಸ್ಸೈ ಮಾತಿಗೆ ಮತ್ತ ನಕ್ಕು ಹೇಳಿದ ಪೀಸಿ, "ಗೋವಾದಾಕಿ ರಾಯಚೂರಿಗೆ ಬಂದು ಮೂರು ತಿಂಗಳಾಯಿತಂತ. ಪಿಯುಸಿ ತನ ಓದ್ಯಾಳಂತ."

"ಆ... ಇವತ್ತು ನಾಳೆ ಇದು ಫ್ಯಾಷನ್ ಆಗ್ಯಾದ. ಈ ನಡುವ ಈ ಸಾಫ್ಟುವೇರ್ ಕೆಲ್ಸಾ ಮಾಡಾ ಹುಡಿಗೇರೇ ಮೊಬೈಲ್ ಫೋನ್ ಇಟುಗಂಡು ಈ ದಂಧಾ ಮಾಡಾಕತ್ಯಾರಂತ. ಇನ್ನು ಪಿಯುಸಿ ಯಾ ಲೆಕ್ಕ? ನಾನ್ ದಾವಣಗೆರಾಗ ಇದ್ದಾಗ ಮೆಡಿಕಲ್ ಓದೋ ಹುಡಿಗೀರ್ನ ಹಿಡಿದಿದ್ದೆ. ರೊಕ್ಕದ ಸಲುವಾಗಿ ಅಂತ ಅಲ್ಲ... ಈ ಡ್ರಗ್ಸ್ ಇರ್ತಾವಲ್ಲ... ಆ ಚಟಕ್ಕ ಬಿದ್ದು ಇಂತದಕ್ಕ ಇಳಿತಾರ."

ಸ್ವಲ್ಪ ಹೊತ್ತು ಆದಮ್ಯಾಲ ವೀರಭದ್ರೇಶ್ವರ ಖಾನಾವಳ್ಯಾಗ ಕಟಿರಟ್ಟಿ ಕಾಳುಪಲ್ಯ, ಕಡ್ಲೆಪುಡಿ